## ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ

ಸಂಖ್ಯೆ: ಮಾ ಹ.ಆ:4195/10/31/2019(ಬಿ-2)

3 ಮತ್ತು 4ನೇ ಮಹಡಿ, 5ನೇ ಹಂತ,
ಬಹುಮಹಡಿ ಕಟ್ಟಡ, ಬೆಂಗಳೂರು,
ದಿನಾಂಕ: 10.08.2020.

ಇಂದ:-

ವಿಲೇಖನಾಧಿಕಾರಿಗಳು,
ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ,
ಬೆಂಗಳೂರು.

ಇವರಿಗೆ:-

ವ್ಯವಸ್ಥಾಪಕ ನಿರ್ದೇಶಕರು,
ಬೆಸ್ಕಾಂ, ನಿಗಮ ಕಾರ್ಯಾಲಯ,
ಕೆ.ಆರ್.ವೃತ್ತ, ಬೆಂಗಳೂರು.

ಮಾನ್ಯರೇ,

ಮೇಲ್ಕಂಡ ದೂರಿನ ಬಗ್ಗೆ ದಿನಾಂಕ: 10.08.2020ರಂದು ಈ ಕೆಳಗಿನಂತೆ ಆದೇಶ ಮಾಡಲಾಗಿದೆ. ಆದೇಶವು ಸ್ವಯಂವೇದ್ಯವಾಗಿದೆ.

ದೂರುದಾರರಾದ ಶ್ರೀ ಎಮ್. ಶಿವಶಂಕರ ಇವರು ಆಯೋಗಕ್ಕೆ ಸಲ್ಲಿಸಿದ ದೂರಿನಲ್ಲಿ, ತಾನು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಈ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸಿ ನಿವೃತ್ತಿ ಹೊಂದಿದ್ದು, ತನಗೆ ದಿ: 31.10.2019 ರಿಂದ ಯಾವುದೇ ನಿವೃತ್ತಿ ವೇತನ ನೀಡಿರುವುದಿಲ್ಲವೆಂದು, ತನ್ನ ವಿರುದ್ಧ ಯಾವುದೇ ವಿಚಾರಣೆ ಸಹ ಇರುವುದಿಲ್ಲವೆಂದು, ಆದುದರಿಂದ ಪ್ರಕರಣದಲ್ಲಿ ತನಿಖೆ ಮಾಡಿ ತನಗೆ ನ್ಯಾಯ ದೊರಕಿಸಿಕೊಡಬೇಕೆಂದು ಆಯೋಗವನ್ನು ಕೋರಿರುತ್ತಾರೆ. ಆಯೋಗವು ದೂರರ್ಜಿಯ ವಿಷಯಕ್ಕೆ ಸಂಬಂಧಪಟ್ಟಂತೆ ವಿಚಾರಣೆ ನಡೆಸಿ ವರದಿ ಸಲ್ಲಿಸಲು, ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ, ನಿಗಮ ಕಾರ್ಯಾಲಯ, ಕೆ.ಆರ್.ವೃತ್ತ, ಬೆಂಗಳೂರು. ಇವರಿಗೆ ಆದೇಶಿಸಿದ್ದು, ಅದರಂತೆ ಸದರಿಯವರ ಪತ್ರ ಸಂಖ್ಯೆ: ವ್ಯ.ನಿ./ಆ.ಸ/ಬೆವಿಕಂ/ಬಿಸಿ-1/2019-20/107, ದಿ: 02.01.2020 ರ ಪತ್ರದಲ್ಲಿ ವರದಿಯನ್ನು ಆಯೋಗಕ್ಕೆ ಸಲ್ಲಿಸಿರುತ್ತಾರೆ.

ವರದಿಯಲ್ಲಿ, ಕಾರ್ಯ ನಿರ್ವಾಹಕ ಇಂಜಿನಿಯರ್(ವಿ), ವಿಧಾನಸೌಧ ವಿಭಾಗ, ಬೆವಿಕಂ ರವರು ಈಗಾಗಲೇ ಆಯೋಗಕ್ಕೆ ಪತ್ರ ಸಂಖ್ಯೆ: ಕಾನಿಎಂ(ವಿ)/ವಿವಿ/ಲೆ/ಸಲೆ/19-20/2383-86, ದಿ: 06.12.2019 ರಂದು ಪತ್ರವನ್ನು ಬರೆದಿದ್ದು, ಸದರಿ ನೌಕರರ ಸೇವಾವಧಿಯಲ್ಲಿ ನಿಗಧಿಪಡಿಸಿದ್ದ ವೇತನವು ತಪ್ಪಾಗಿದ್ದು, ಅದನ್ನು ಪರಿಷ್ಕರಿಸಿ ವೇತನ ಮರುನಿಗಧಿ ಮಾಡಬೇಕಾಗಿರುವ ಕಾರಣವನ್ನು ತಿಳಿಸಿರುತ್ತಾರೆಂದು, ಅಲ್ಲದೆ ಸದರಿ ನೌಕರರು ಅವರ ಪಿಂಚಣಿ ದಾಖಲೆಗಳಿಗೆ ಸಂಬಂಧಪಟ್ಟಂತೆ ಪ್ರಾಧಿಕಾರಿಯಲ್ಲದ ಅಧಿಕಾರಿಗಳಿಂದ ಸಹಿ ಮಾಡಿಸಿ, ವಿಭಾಗಕ್ಕೆ ಕಡತವನ್ನು ಸಲ್ಲಿಸಿದ್ದರಿಂದ ಹಾಗೂ ಕೆಲವು ನ್ಯೂನತೆಗಳಿಗೆ ಸಂಬಂಧಿಸಿದಂತೆ, ಸದರಿ ನೌಕರರಿಗೆ ಹೊಸದಾಗಿ ಪಿಂಚಣಿ ಡಾಕೆಟ್‌ನ್ನು ಮುದ್ದಾಂ ಆಗಿ ದಿ: 06.12.2019 ರಂದು ನೀಡಿರುವುದಾಗಿ ತಿಳಿಸಿರುತ್ತಾರೆಂದು ಮತ್ತು ಈ ಎಲ್ಲಾ ಅಂಶಗಳಿಂದಾಗಿ

ಮು ತಿ.ನೋ

ಪಿಂಚಣಿ ಮಂಜೂರಾತಿಯು ವಿಳಂಬವಾಗಿದೆಯೇ ಹೊರತು ಉದ್ದೇಶ ಪೂರ್ವಕವಾಗಿ ಆಗಿರುವುದಿಲ್ಲವೆಂದು, ಸದರಿ ನೌಕರರು ಪಿಂಚಣಿ ಕಡತವನ್ನು ಕ್ರಮಬದ್ಧವಾಗಿ ಸಲ್ಲಿಸಿದ ಕೂಡಲೇ ಪಿಂಚಣಿ ಮತ್ತು ಇತರೆ ನಿವೃತ್ತಿ ಉಪಲಬ್ಧಗಳನ್ನು ವಿಳಂಬವಿಲ್ಲದೆ ಮಂಜೂರು ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿರುತ್ತಾರೆ.

ದೂರುದಾರರು ದಿ: 18.05.2020 ರ ಪತ್ರದಲ್ಲಿ ತನಗೆ ಬೆಸ್ಕಾಂ ಸಂಸ್ಥೆಯವರು ಟೈಮ್‌ಬೌಂಡ್ ಇನ್‌ಕ್ರಿಮೆಂಟ್ ನ್ನು ನೀಡಿರುವುದಿಲ್ಲವೆಂದು, ಆದ್ದರಿಂದ ಸಂಬಂಧಪಟ್ಟವರಿಗೆ ಸದರಿ ಟೈಮ್‌ಬೌಂಡ್ ಇನ್‌ಕ್ರಿಮೆಂಟ್ ನ್ನು ಮಂಜೂರು ಮಾಡಲು ನಿರ್ದೇಶಿಸಬೇಕೆಂದು ಆಯೋಗವನ್ನು ಕೋರಿರುತ್ತಾರೆ.

ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ, ನಿಗಮ ಕಾರ್ಯಾಲಯ, ಕೆ.ಆರ್.ವೃತ್ತ, ಬೆಂಗಳೂರು, ಇವರ ವರದಿಯನ್ನು ಹಾಗೂ ಪೂರಕ ದಾಖಲೆಗಳನ್ನು ಪರಿಶೀಲಿಸಿದ ಆಯೋಗವು, ಪ್ರಕರಣದ ವಿಷಯಕ್ಕೆ ಸಂಬಂಧಪಟ್ಟಂತೆ, ದೂರುದಾರರಿಗೆ ಪಿಂಚಣಿ ಮತ್ತು ಇತರೆ ನಿವೃತ್ತಿ ಉಪಲಬ್ಧಗಳನ್ನು ತಡ ಮಾಡದೇ ಮಂಜೂರು ಮಾಡಿ 8 ವಾರಗಳಲ್ಲಿ ವರದಿಯನ್ನು ಸಲ್ಲಿಸಲು ಆದೇಶಿಸಿದೆ. ದೂರುದಾರರು ದಿ: 18.05.2020 ರ ಪತ್ರದ ಪ್ರತಿಯನ್ನು ಮೇಲ್ಕಂಡ ವ್ಯವಸ್ಥಾಪಕ ನಿರ್ದೇಶಕರಿಗೆ ಕಳುಹಿಸಿ ದೂರುದಾರರಿಗೆ ಟೈಮ್‌ಬೌಂಡ್ ಇನ್‌ಕ್ರಿಮೆಂಟ್‌ನ್ನು ನಿಯಮದಂತೆ ಮಂಜೂರು ಮಾಡಲು ಕ್ರಮವಹಿಸುವಂತೆ ಆದೇಶಿಸಿ, ಸದರಿಯವರ ವರದಿಯನ್ನು ಅಂಗೀಕರಿಸಿ, ಪ್ರಕರಣವನ್ನು ಮುಕ್ತಾಯಗೊಳಿಸಿದೆ.

**ಸಹಿ:-(ಕೆ.ಬಿ.ಚಂಗಪ್ಪ)**
**ಸದಸ್ಯರು.**

**ಇದು ತಮ್ಮ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ**

**ತಮ್ಮ ವಿಶ್ವಾಸಿ,**

**ಸಹಾಯಕ ವಿಲೇಖನಾಧಿಕಾರಿ,**
**ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ.**

**ಪ್ರತಿ:** ಶ್ರೀ ಎಮ್ ಶಿವಶಂಕರ (ಜೂನಿಯರ್ ಅಸಿಸ್ಟೆಂಟ್, ಬೆಸ್ಕಾಂ) ನಂ 58, 7ನೇ ಕ್ರಾಸ್, 4ನೇ ಮೇನ್, ಬಾಲಾಜಿ ನಿಲಯ, ಮೊದಲ ಮಹಡಿ, ಎಸ್ ಆರ್ ನಗರ, ಬೆಂಗಳೂರು

ದೂ